101

ಮೈಸೂರ ಗಿಜಿಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 7.

ಬೆಂಗಳೂರು, ಗುರುವಾರ, ಫಿಬ್ರವರಿ ತಾ॥ 20, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂವ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಸರ್‌ಗಳು, ಫಾರೆಸ್ಟ್ರು, ರಜಿಸ್ಟ್ರೇರ್ಷ ವ ಯಡ್ಯೂಕೇರ್ಷ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಪ್ರತಿ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 4ನೇ ಫಿಬ್ರವರಿ 1896.

ನಂ. 8979.—ಲೋ. ಫಂ. 257.—92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಷ ರಗ್ಯುಲೇಷನಿನ 6ನೇ ಸೆಕ್ಷ್ಷ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಕಡೂರು ಗ್ರಾಮದಲ್ಲಿ ಮಾದಿಗರಹಟ್ಟಿಯನ್ನು ಕಟ್ಟುವಬಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು—ಕಡೂರು—ತಾಲ್ಲೂಕು—ಕಡೂರು—ಗ್ರಾಮ—ಕಡೂರು—ಖಾತೇದಾರನ ಹೆಸರು—ಚವ್ವಡಾ.

ಜಮೀನಿನ ತಪ್ಶೀಲ್.

ಸರ್ವೇ ನಂಬರ್—ಪೈಕಿ 73—ವಿಸ್ತೀರ್ಣ—ಖುಷ್ಕೀ 5 ಎಕರೆ 8 ಗುಂಟೆ—ಕಂದಾಯ—ರೂ. 4—12—0.

ಚಕ್ಕುಬಂದಿ.

ಪೂರ್ವಕ್ಕೆ—ಸರ್ವೇ ನಂಬರ್ 74, ದೇವಯ್ಯನ ಭೂಮಿ.
ಪಶ್ಚಿಮಕ್ಕೆ—ಡಿಟೋ 72, ಲಕ್ಕನ ಭೂಮಿ.
ಉತ್ತರಕ್ಕೆ—ಸರ್ವೇ ನಂ. 69, ಹನುಮನ ಭೂಮಿ.
ದಕ್ಷಿಣಕ್ಕೆ—ಡಿಟೋ 73, ಪೈಕಿ ತಿಮ್ಮನ ಭೂಮಿ.

ತಾರೀಖು 4ನೇ ಫಿಬ್ರವರಿ 1896.

ನಂ. 8976.—ಲೋ. ಫಂ. 257.—92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಮನೆ ವ ಜಮೀನ್‌ಗಳು ಸರಾ ರ್ ಕೆಲಸಕ್ಕೆ ಅಂದರೆ ಗೋರೀಬಿದನೂರು ಪಹರ್ ಮ್ಯುನಿಸಿಪಾಲಿಟಿಯಲ್ಲಿ ವಂಡು ಹೊಸರಸ್ತೆ ಹಾಕುವ ಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳ್ದಿದಾರನ ಹೆಸರು.	ಜಮೀನಿನ ತಫ್ಸೀಲ್. ನಂ.	ವಿವರಣೆ.	ಬೇಕಾದ ವಿಸ್ತೀರ್ಣ.	ದಾಮೋಷ್ಟಾಯಿ ಕಂದಾಯ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಗೋರೀಬಿದನೂರು.	ಗೋರೀಬಿದನೂರು ಪಹರ್.	ಗಾಣಿಗ ಲಿಂಗಂಣ		ಗಾಣಿಗ ಲಿಂಗಂಣನಬೀದಿಯಲ್ಲಿ ನಾಲ್ಕು ಅಂಕಣ ಮನೆ ಮತ್ತು ಖಾಲಿ ಜಮೀನು	ಲಾ. ರು. ಮ. ಸಲೆ ಅಡಿ 13-6-78		ಸರ್ವೆ ನಂ. 10 11—12	ಬೀದಿ	ಲಿಂಗಂಣನ ಮನೆ ಮತ್ತು ಗಳ	ಲಿಂಗಂಣನ ಮನೆ ಮತ್ತು ಖಾಲೀ ಅಂಗಳ
			ಡಿಟೋ		ಸದರೀ ಬೀದಿಯಲ್ಲಿ 9 ಅಂಕಣ ಮನೆ	30-6-180		ಡಿಟೋ	ಡಿಟೋ ಲಿಂಗಂಣನ ಮನೆ ಮತ್ತು ಖಾಲೀ ನಿವೇಶನ	ಕುಂಬಾರ ಮುನೆಪ್ಪನ ಮನೆ	ನಾಮ ಸುಬ್ಬಯ್ಯನ ಹಿತ್ತಲು
			ಕುಂಬಾರ ಕಪ್ಪಣ್ಣನ ಮುನಿಯಪ್ಪನ ಮನೆ		8 ಅಂಕಣ ಮತ್ತು ಖಾಲೀ ನಿವೇಶನ	15-6-90		ಡಿಟೋ ನಂಬರ್ 12	ಕುಂಬಾರ ಮುನೆಪ್ಪಕಪಿನಯ್ಯನ ಮನೆಪ್ಪನ ಮನೆ ಮತ್ತು ರಸ್ತೆಯಾನೆ ಕಾಲೆದಾರಿ	ಲಿಂಗಂಣನ ಮನೆ	ಲಿಂಗಂಣನ ಮನೆ
			ಗವ್ವರಯ್ಯನ ವೆಂಕಟರಮಣನ ಜಮೀನ್	12	ತೋಟ	ಎಕರೆ ಗುಂಟೆ 0—4	0-9-7	12ನೇ ಸರ್ವೆ ನಂಬರಿನ ಭೂಮಿಗ	ಕುಂಬಾರ ತಿಮ್ಮಪ್ಪ ವಗ್ಗೆರೆರ ಮನೆಅಂಗಳ	ಸರ್ವೆ ನಂ. 13 ಮತ್ತು ರಂಗಯ್ಯನ ತಲಪರಿ	ಕುಂಬಾರ ಮುನೆಪ್ಪನ ಮನೆ
			ನಾಮ ರಂಗಯ್ಯನ ಡಿಟೋ	13	ಡಿಟೋ ಮತ್ತು 5 ಅಂಕಣದ ಕಲ್ಲು ಮಂಟಪ	3—21	0-3-5	13ನೇ ಸರ್ವೆ ನಂಬರಿನ ಭೂಮಿಗ	ಪನ್ನೆ ಭೂವಿಮುಗೆ ವೋಣಿ ಸಾಬ್ ವ ಸ್ಯೆರೇರ ಮನೆ		ಸರ್ವೆ ನಂ. 12

ತಾರೀಖು 14ನೇ ಫಿಬ್ರವರಿ 1896.

ನಂ. 9446.—ಜು. 1023,—ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 12ನೇ ಸೆಕ್ಷನ್ ಮೇರೆ, ಕಡೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ಟಿ. ಕೆ. ಸುಂದರ ರಾಜಯ್ಯಂಗಾರ್ರು, ಅವರ ತಾಲ್ಲೂಕಿನ ಸರಹದ್ದುಗಳವಳಗೆ ಮೈಸೂರು ರೆವಿನ್ಯೂ ರೆಗ್ಯುಲೇಷನ್ ವ ಪಿನಲ್ ಕೋಡಿಗನುಸರಿಸಿ, ಮೊಕದ್ದಮೆಗಳನ್ನು ವಿಚಾರಣೆ ಮಾಡಲು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊ ಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 9448.—ಜು. 1025.—ಚಿತ್ರದುರ್ಗದ ಮುನಿಸಿಪಲ್ ಮೆಸ್ಸರ್ ಎ. ಆನಂದರಾಯರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್ ಗಳ 204ನೇ ಆರ್ಟಿಕಲ್ ಮೇರೆ, 1896ನೇ ಇಸವಿ ಫಿಬ್ರವರಿ 29ನೇ ಮುಕ್ತಾಯ ಲಾಗಾಯತು ಪೂರಾ ತಲಬಿನ ಮೇಲೆ ವಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆಸ್ಸರ್ ಎ. ಆನಂದರಾಯರ ಗೈರ್ ಹಾಜರೀ ಕಾಲದಲ್ಲಿ ನಗರದ ಡಿಸ್ಟ್ರಿಕ್ಟು ವ ಸೆಷನ್ ಕೋರ್ಟಿನ ಶಿರಸ್ತೇದಾರ್ ರಾಮಾನುಜ ಯ್ಯಂಗಾರ್ರು ಆಕ್ಟಿಂಗ್ ತರೀಕಾಗಿ ಕೆಲಸ ನೋಡತಕ್ಕದ್ದು.

ತಾರೀಖು 15ನೇ ಫಿಬ್ರವರಿ 1896.

ನಂ. 9485.—ಲೋ. ಫಂ. 90.-92.—ಇಂಗ್ಲಂಡಿಗೆ ಪ್ರಯಾಣ ಮಾಡಿದ, ರೆವರ್ಂಡ್ ಡಿ. ಯೆ. ರೀಸ್ ಯವರಿಗೆ, ಬದಲಾಗಿ ರೆವರ್ಂಡ್ ಈ. ಜಬ್ಬಿಯು. ರೆಡ್‌ಫರ್ನ್ ಯವರು, ತುಮಕೂರು ಮ್ಯುನಿಸಿಪಾಲಿಟಿಯ ವೊಬ್ಬ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರು ತ್ತಾರೆ.

ನಂ. 9500.—ಯು. 273.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಉತ್ತರ ಸರ್ಕಲ್ಲಿನ ಸ್ಕೂಲ್‌ಗಳ ಡೆಪ್ಯೂಟಿ ಇನ್‌ಸ್ಪೆಕ್ಟರ್ ಮೆಸ್ಸರ್ ಎಸ್. ರಂಗಾಚಾರ್ಲು ಯವರಿಗೆ, 1896ನೇ ಇಸವಿ ಜನವರಿ 31ನೇ ಮುಕ್ತಾಯ ಲಾಗಾಯತು ಹತ್ತು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಫಿಬ್ರವರಿ 1896.

ನಂ. 9505.—ಜು. 1040.—ಬೆಂಗಳೂರು ಅಡಿಷನಲ್ ಮ್ಯುನಿಸಿಫರಾದ ಮೆಸ್ಸರ್ ಯಂ. ಹಂಜಾ ಹುಸೇನ್ ಯವರಿಗೆ, ಮೈಸೂರ ಸರ್ವಿಸ್ ರೆಗ್ಯುಲೇಷ್ಯನ್‌ಗಳ 203ನೇ ಆರ್ಟಿಕಲ್ ಅನುಸರಿಸಿ, 1896ನೇ ಇಸವಿ ಜನವರಿ 28ನೇ ಮುಕ್ತಮಿನಾರಭ್ಯ ಅರ್ಧ ತಲಬಿನ ಲೀ ಹದಿನೈದು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತು.

ತಾರೀಖು 18ನೇ ಫಿಬ್ರವರಿ 1896.

ನಂ. 9590.—ಜು. 1050.—ಕೋಲಾರ್ ಗೋಲ್ಡ್ ಫೀಲ್ಡ್‌ನ ಸ್ಪೆಷಿಯಲ್ ಮಾಜಿಸ್ಟ್ರೇಟ್ ವ ಮ್ಯುನಿಸಿಫರಾದ ಮೆಸ್ಸರ್ ಜಿ. ಟ್ಟಿ. ರೈಟ್‌ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷ್ಯನ್‌ಗಳ 171ನೇ ಸೆಕ್ಷನ್ ಅನುಸರಿಸಿ, 1896ನೇ ಇಸವಿ ಜನವರಿ 30ನೇ ಕ್ಕು ಲಾಗಾಯತು 2 ದಿವಸಗಳ ಕಾಜುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 19ನೇ ಫಿಬ್ರವರಿ 1896.

ನಂ. 9670.—ಜು. 1062.—ಬೆಂಗಳೂರು ಸಿಟಿ ಮಾಜಿಸ್ಟ್ರೇಟರಾದ ಮೆಸ್ಸರ್ ಎಸ್. ವೈದ್ಯನಾಥ ಅಯ್ಯರವರಿಗೆ, ಮೈಸೂ ಸರ್ವಿಸ್ ರೆಗ್ಯುಲೇಷ್ಯನ್‌ಗಳ 172ನೇ ಸೆಕ್ಷನ್ ಪ್ರಕಾರ 1896ನೇ ಇಸವಿ ಫಿಬ್ರವರಿ 17ನೇ ಮುಕ್ತಂ ಲಾಗಾಯತು 27ನೇ ಮ ಂ ಪರಿಯಿಗೆ ಈ ಉಭಯ ದಿವಸಗಳೂ ಸೇರಿ 11 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ರೆವಿನ್ಯೂ.

ತಾರೀಖು 7ನೇ ಫಿಬ್ರವರಿ 1896.

ನಂ. 7121.—ರೆ. 2758.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ, ಯಡೆಹಳ್ಳಿ ಸಬ್ ತಾಲ್ಲೂ ಡಿಪ್ಯೂಟಿ ಅಮಲ್ದಾರ್ ಎಲ್ಲೂರ್. ಶ್ರೀನಿವಾಸರಾಯರಿಗೆ, ಮಾಹೆ ಮಜಕೂರ್ 5ನೇ ಮುಕ್ತಂ ಲಾಗಾಯತು ಅಥವಾ ಅವರು ಅದನ್ನ ಉಪಯೋಗಿಸಿಕೊಂಡ ತಾರೀಖು ಮೊದಲು 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7124.—ರೆ. 2761.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಸಬ್ ಡಿವಿ ರ್ ಆಫಿಸರ್ ಮೆಸ್ಸರ್ ಸಿ. ರಾಘವಾಚಾರ್ಲು ಬಿ. ಎ. ಯವರಿಗೆ, 1896ನೇ ಇಸವಿ ಜನವರಿ 27ನೇ ಮುಕ್ತಂ ಲಾಗಾಯತು ಅಥವಾ ಅವರದನ್ನ ಉಪಯೋಗಿಸಿಕೊಂಡ ತಾರೀಖು ಮೊದಲು 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7127.—ರೆ. 2764.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ, ಪಾವಗಡದ ಅಮಲ್ದಾರ್ ಆರ್. ರಾಘವೇಂದ್ರರಾಯರಿಗೆ, 1896ನೇ ಇಸವಿ ಫಿಬ್ರವರಿ 4ನೇ ಮುಕ್ತಂ ಲಾಗಾಯತು ಅಥವಾ ಅವರದನ್ನ ಉಪಯೋಗಿಸಿಕೊಂಡ ತಾರೀಖು ಮೊದಲು 8 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ಜೆ. ಡಿ. ಚಿನ್ನಪ್ಪನವರು ಪಿಳ್ಳಿಯವರು, ಆರ್. ರಾಘವೇಂದ್ರರಾಯರು ರಜಾದ ಮೇಲಿರುವ ಕಾಲದ ಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಟೋ ತಾಲ್ಲೂಕಿನ ಚಾರ್ಜ್ ವಹಿಸಿರತಕ್ಕದ್ದು.

ನಂ. 7150.—ಫಾ. ಫೈ. 103.—95 — ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಕೋಡ್ಡಾ ಸೂಪರ್‌ಟೆಂಡೆಂಟರಾದ ಮೆಸ್ಸರ್ ಕೆ. ಪಾಪಯ್ಯಂಗಾರ್ಯಿಗೆ, 1895ನೇ ಇಸವಿ ಡಿಸೆಂಬರ್ 8ನೇ ಮುಕ್ತಂ ಲಾಗಾಯತು 16ರ ವ ಗೆ 9 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 8ನೇ ಫಿಬ್ರವರಿ 1896.

ನಂ. 7136.—ರೆ. 2770.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟ್ ಎಕ್ಸಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಶ್ರೀನಿವಾಸಾಚಾರ್ಲು ಯವರಿಗೆ, 1896ನೇ ಇಸವಿ ಫಿಬ್ರವರಿ 3ನೇ ತಾರೀಖಿನಲ್ಲಿ 1 ದಿವಸದ ಕ್ಕೆ ಕಾಯಮ್ ರಜಾ ಕೊಡಲ್ಪಟ್ಟಿತು.

ನಂ. 7139.—ರೆ. 2773.—ಬೆಂಗಳೂರು ಡಿಸ್ಟ್ರಿಕ್ಟ್ ಪ್ರೊಪೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ವಿ. ಆರ್. ತ್ಯಾಗರಾಜ ಯ್ಯರ್ ಎ. ಎ. ಯವ ನಂ. 6680.—ರೆ. 2534ನೇ ನಂಬರ್ ಗವರ್ನಮೆಂಟ್ ಇಸ್ತಿ 1896ನೇ ಇಸವಿ ಸೆ ಂ. ಪ್ರ. 24ನೇ ಮುಕ್ತಂ ಲಾಗಾಯತು ಅಥವಾ ಶಿ ಕೊಡಲ್ಪಟ್ಟ 8 ದಿವ ಕ್ಯಾಜುಯಲ್ ರಜಾ ಪೈಕಿ 7 ದಿವಸಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾ ದಾರ್‌ನಾಮೆಯಿಂದ ಆಥಾ ಯಾಗಿ ವುಳಿದ ಭಾಗದ ದರಿಂದ ರದ್ದು ಮಾಡಲ್ಪಟ್ಟಿತು.

ದಿದರು ದ ಸ್ತ ಮಾಡಲ್ಪಟ್ಟಿತು.

ತಾರೀಖು 8ನೇ ಜನವರಿ 1896.

ನಂ. 6084.— ಡಿಸ್ಟ್ರಿಕ್ಟ್ ಯಾ ಮನ್ನಾ ಅಲ್ಲದ ಸರ್ಕಾರಿ ಜಂಗಲಿಗಳಿಂದ ಮರ ಮತ್ತು ಇತರ ಫಾರೆಸ್ಟ್ ಹುಟ್ಟುವಳಿಯನ್ನು ಖಾಸಗಿಯವರು ತೆಗಪುಕೊಳ್ಳುವ ವಿಷಯದಲ್ಲಿ ಅವರ ಹಕ್ಕುದಾರಿಕೆಗಳನ್ನು ಪೂರ್ತಿಯಾಗಿ ವಿವರಿಸಿ, 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 23, 24, 25, ವ 26ನೇ ಸೆಕ್ಷನುಗಳನುಸರಿಸಿ ಉಂಟುಮಾಡಲ್ಪಟ್ಟ ಇದರಡಿ ಕಂಡ ಫಾರೆಸ್ಟ್ ರೂಲ್ಸ್‌ಗಳು, ಫಾರೆಸ್ಟ್ ರೂಲ್ಸ್‌ಗಳು ತಿದ್ದುಪಾಟಾಗುವ ನಿರೀಕ್ಷೆಯಲ್ಲಿ ಮೇಲೆ, ಶಿವಮೊಗ್ಗಾ ಕಡೂರು ವ ಹಾಸನ ಡಿಸ್ಟ್ರಿಕ್ಟುಗಳಿಗೋಸ್ಕರ ಮೈಸೂರು ಗವರ್ನಮೆಂಟಿನಿಂದ ಮಂಜೂರ್ ಮಾಡಲ್ಪಟ್ಟು ಸತ್ಯರ ತಿಳುವಳಿಕೆಗೆ ಬರ್ಯೆ ಘೋಷಿಸಲ್ಪಟ್ಟಿರುತ್ತೆ. ಈ ರೂಲ್ಸ್‌ಗಳು ಕಾಫಿ ಪ್ಲಾಂಟರುಗಳಿಗೆ ಅನ್ವಯಿಸುವದಿಲ್ಲವೆಂದು:—

1. ಈ ರೂಲ್ಸ್‌ಗಳಲ್ಲಿ ರೈತರುಗಳಿಗೆ ಕೊಡಲ್ಪಟ್ಟ ಹಕ್ಕುದಾರಿಕೆಗಳು, ಗೊತ್ತಾಗಿ ವಿವರಿಸಲ್ಪಟ್ಟಿರತಕ್ಕಂಥಾ ಗ್ರಾಮ ಫಾರೆಸ್ಟ್ ಗಳ ಸರಹದ್ದುಗಳ ವಳಗೆ ಅವರಿಂದ ಚಲಾಯಿಸಲ್ಪಡತಕ್ಕದ್ದು, ಮತ್ತು ಹಾಂಗೆ ಗ್ರಾಮ ಫಾರೆಸ್ಟುಗಳು ವಿವರಿಸಿ ಗೊತ್ತು ಮಾಡಲ್ಪಡದೇ ಹದಿ ನಲಿಯಾಗಲಿ ಅಥವಾ ಅದರ ಭಾಗದಲ್ಲಾಗಲಿ ಚಲಾಯಿಸ

2. ಗ್ರಾಮ ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಈ ರೂಲ್ಸಿಗಳನುಸರಿಸಿ ಫಾರೆಸ್ಟ್ ಹುಟ್ಟುವಂಥಾಗತಕ್ಕಂಥಾ ಮರಗಳು ದರೆ ದಾಲ್ಚಿನ್ನಿ ಅಥವಾ ಯಲಗಾ, ಹುಳಿಹಣ್ಣು, ಅಳಲೇಕಾಯಿ, ಕಾಚು, ಗೇರು, ಅರಿದಾಳ, ಅಂಟವಾಳ, ಮಡ್ಡಿಧೂಪ, ಮತ್ತು ಮಡಿವಗೈರೆ ಹುಟ್ಟುವ ಮರಗಳು ಕಡಿದುಬ್ಬಡಕೂಡದು.

ಗ್ರಾಮ ಮತ್ತು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿನ ಗಂಧ, ತೇಗ, ಬೀಟೆಯಾನೆ ಕರೀಮರ, ಮಳಲಿ, ಕುವ್ವೆ, ಕಾರಾಚಿ ಮತ್ತು ಲಾರಿ ಈ ಜಾತಿ ಮರಗಳು ಪೂರ್ತಿಯಾಗಿ ಫಾರೆಸ್ಟ್ ಇಲಾಖೆಯ ಸ್ವಾತಂತ್ರ್ಯದಲ್ಲಿರತಕ್ಕವು. ರೈತರು ಮತ್ತು ವ್ಯಾಪಾರಸ್ಥರು ಸ ಈ ತರಹೆ ಮರಗಳಿಗೋಸ್ಕರ, ಫಾರೆಸ್ಟ್ ಇಲಾಖೆಯಿಂದ ವಿಧಿಸಲ್ಪಟ್ಟ ಪರತ್ತುಗಳ ಮೇಲೆ ದರಗಳನ್ನು ಪಾವತಿಮಾಡಜೇಕು.

3. "ಅವಲ್ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹಲಸು, ಹೆಬ್ಬಲಸು, ಮತ್ತಿ, ಹೊನ್ನೆ, ನಂದಿ, ಮತ್ತು ಇಪ್ಪೆ

"ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹುಲ್ಲೆ, ಜಂಬೀಯಾನೆ ಬಿಲ್ವೆ, ಹುರಗಲು, ಹೆತ್ತಿಗ ಅಥವಾ ಅ ತ್ಯಾಗ, ಬಿಲ್ವಾರ, ತೊಡಸಲು, ಚಳ್ಳೆ, ಬಾಗಿ, ಹಡಗ, ನಂಜ ಅಥವಾ ಬಿಕಾಳ, ಸಂಪಿಗೆ, ವಾಟೆ, ಬಲಿಗೆ, ಹೌಲಾಡಿ ಅಥವಾ ಹರಳಬು ಮತ್ತು ಸಗದೆ ಮರಗಳು.

"ಕಾಡುಮರ" ಅಂದರೆ ಮನ್ನಾಜಾತಿ ಅಲ್ಲದ ಮತ್ತು ವಿಂಗಡಿಸಲ್ಪಟ್ಟ ರಖಮಿಗೆ ಸೇರದಂಥಾ ಇತರ ಮರಗಳು.

"ವ್ಯವಸಾಯ ಸಾಧನಗಳು" ಅಂದರೆ ನೇಗಲುಗಳು, ಸೂಲು ಹೊಡಿಯುವ ಹಲಿಗೆಗಳು, ಹೆಂಟೆ ಬಡಿಯುವ ತುಂಡುಗ ಸನಿಕೆಗಳು, ಕೂರಿಗೆ, ಮಮ್ಮಟೀ ಕಾನುಗಳು, ಗುದ್ದಲಿ ಕಾವುಗಳು, ಮತ್ತು ಇತರ ತಮಾಂ ವ್ಯವಸಾಯ ಸಾಧನಗಳೆಂದು ಅ ವಾಗತಕ್ಕದ್ದು. ಆದರೆ ಇದರಲ್ಲಿ, ಮಲನಾಡಿನಲ್ಲಿ ವಿನಾ ಅನ್ಯತ್ರ ಕಬ್ಬಿನ ಅಲೆಗಳು, ಭತ್ತ ಕುಟ್ಟುವ ಯಂತ್ರಗಳು, ಮತ್ತು ದ ತೊಟ್ಟಗಳು ಅಡಗಿರುವದಿಲ್ಲವು.

"ಮಲ್ನಾಡ್" ಅಂದರೆ ಎ. ಆಪೆಂಡಿಕ್ಸಿನಲ್ಲಿ ವಿವರಿಸಲ್ಪಟ್ಟ ತಾಲ್ಲೂಕುಗಳು ಮತ್ತು ತಾಲ್ಲೂಕುಗಳ ಪ್ರದೇಶಗಳು ಎಂದು ಅ ವಾಗತಕ್ಕದ್ದು; ಇತರ ಎಲ್ಲಾ ಪ್ರದೇಶಗಳೂ, ಮೈದಾನ ಎಂದು ಭಾವಿಸಲ್ಪಡತಕ್ಕದ್ದು.

"ರೈತ" ಅಂದರೆ ಒಬ್ಬ ಪಟ್ಟೇದಾರ, ಖಾತೇದಾರ, ಅಥವಾ ಸರ್ಕಾರದ ಜಮೀನಿನ ಹಿಡುವಳಿಯ ರಿಜಸ್ಟರ್‌ದಾರ ಅಥವಾ ಚ ಇನಾಂದಾರ ಇವರುಗಳೆಂದು ಅರ್ಥವಾಗತಕ್ಕದ್ದಲ್ಲದೆ ಮೇಲ್ಕಂಡ ತರಹೆಯ ಜಮೀನ್ ಹಿಡುವಳಿದಾರರ ಜಂಟೀದಾರರು ಅಥ ಹಿಡುವಳಿದಾರರನ್ನು ಸುದಾ ಅಡಗಿಸಿಕೊಂಡಿರುತ್ತೆ. ಅಂಥಾ ಹಿಡುವಳಿದಾರರು ಅವರ ಪಟ್ಟುದಾರ, ಚಿಲ್ಲರೆ ಇನಾಂದಾರ್ ಅಥವಾ ಜ ಹಿಡುವಳಿದಾರಿಗಳೊಂದಿಗೆ, ಈ ರೂಲ್ಸಿನ 10ನೇ ಪ್ಯಾರಾದಲ್ಲಿ ಅಡಗಿರುವ ತೇದಾದಿನ ವಳಗಾಗಿ, ಮರ ವ ಬೊಂಬುಗಳನ್ನು ಪಡೆಯ ಬ್ಯೆ ಅರ್ಹರಾಗಿ ಇರತಕ್ಕದ್ದು.

4. ಐಂದ ಉಂಟುಮಾಡಲ್ಪಡುವಂಥಾ ವಿಪ್ಲಾವುಗಳಿಗೆ ವಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಹುಲ್ಲು ಮೇಯಿಸ ಬ್ಯೆ ಹಾಲಿ ಇರತಕ್ಕ ಹಕ್ಕು ದಾರಿಗಳಿಗೆ ಈ ರೂಲ್ಸಗಳು ಲಗಾವಾಗುವದಿಲ್ಲವು; ಅಥವಾ ಮಲನಾಡಿನಲ್ಲಿ ಅವರವರ ಸೊಪ್ಪಿನ ಬೆಟ್ಟಗಳ ತೋಟಗಳ ಸ್ವಂತಗಾರರ ಹಾಲಿ ಇರತಕ್ಕ ಹಕ್ಕುಗಳಿಗಾಗಲಿ ಕಾನುಗಳಲ್ಲಿ ಅವರ ಹಕ್ಕುದಾರಿಗಳಿಗಾಗಲಿ ಈ ರೂಲ್ಸಗಳು ಅನ್ವಯಿ ವದಿಲ್ಲವು. ರಕ್ಷಣೆ ಬಗ್ಯಾಗಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಾದರೂ ಫಾರೆಸ್ಟ್ ಇಲಾಖೆಯವರಿಂದ ಮುಚ್ಚಲ್ಪಡುವದನ್ನು ಇದರಲ್ಲಿ ಅ ಇರತಕ್ಕ ಯಾವ ಅಂಕವೂ ನಿರೋಧಿಸುವದಿಲ್ಲವು.

5. ಮಲ್ನಾಡ್ ವ ಮೈದಾನಿನ ರೈತರುಗಳು 1 ವ 2ನೇ ರೂಲಿಗೆ ಬಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಪರ್ಮಿಟ್ಟೆಯ ಪ್ಯಾಸಿಲ್ಲದೆ ಮುಫತ್ತು ತೆಗದುಕೊಳ್ಳಬಹುದಾದ ಸಾಮಾನುಗಳ್ಯಾವವಂದರೆ: —

1ನೇದು.—ವ್ಯವಸಾಯ ಸಾಧನಗಳಿಗೋಸ್ಕರ ಬೇಕಾದ ಪರಂತು ವಿಂಗಡಿಸಲ್ಪಟ್ಟ ರಖಮಿಗೆ ಸೇರದೆ ಇರತಕ್ಕಂಥಾ ಮರಗಳ ಪರಂತು ಮಲ್ನಾಡಿನಲ್ಲಿ ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು ಈ ಕೆಲಸಕ್ಕೋಸ್ಕರ ಪಟೇಲನ ಬರ ಮೂಲಕವಾದ ಅಪ್ಪಣೆ ಚೀಟಿ ಪಡೆದು ತೆಗದುಕೊಳ್ಳಲ್ಪಡಬಹುದು. ಕಡಿಯಲ್ಪಡುವಂಥಾ ಮರಗಳು ಬಲ್ಲಹ್ಮ ಯಾ ಗಂಟುಗಳಾಗಿ ನಾಟಾ ಬಗ್ಯೆ ನಾಲಾಯಕ್ಕಾದ್ದಾಗಿರಬೇಕು. ಮಲ್ನಾಡಿನಲ್ಲಿ ಎಣ್ಣೆ ಆಲೆಗಳು, ಭತ್ತ ಕುಟ್ಟ ವ ಯಂತ್ರಗಳು ದನಗಳ ತೊಟ್ಟಿಗಳು ಇವುಗಳಿಗೋಸ್ಕರ ಮೇಲ್ಕಂಡಂಗೆ ಅನುಮತಿಯ ಪೇರಿಂದ ಮಾಫೀ ಮ್ಯೂ ಪಡೆಯತಕ್ಕದ್ದು. ಈ ಪ್ಯಾಸುಗಳು ಅವರಲ್ಲಿ ವಿವರಿಸೋಣಾದ ಫಲ್ಯಾನೆ ವಳ ಪೂರಾ ತಲಪೀ ಗ್ರಾಮದಲ್ಲಿ ಸದ ಮರಗಳು ಕತರಾಯಿಸಲ್ಪಟ್ಟಿತ್ತೋ ಆ ಗ್ರಾಮದ ಪಟೇಲ ಸಂಗ-ಪ- ಸ್ ಲ ಮರದ ತೇದಾದಿನ ತಾಲ್ಲೂಕಿಗೆ ಇಂಡಾರ್ಸು ಮಾಡಲ್ಪಟ್ಟು ಸಾಸ್ ಮಾಡಲ್ಪಡತಕ್ಕದ್ದು; ಕೋರ್ಟನ ಟ

2ನೇದು.—ಜೇಲಿಗಳು, ತಡಿಕೆಗಳು, ಮತ್ತು ಅಣೆಗಳಿಗೋಸ್ಕರ ಬೇಕಾದ ಕೂಚೆಗಳು, ಗಳು ಮತ್ತು ಬೊಂ ಕಂಬೆಗಳು;

3ನೇದು.—ದನದಹಟ್ಟಿ, ಗುಡಿಸಲು, ಜಪ್ಪರಗಳು, ಚಿಕ್ಕ ರೈತರ ಮನೆಗಳು, ಮತ್ತು ಶಾಲೆಗಳಲ್ಲಿ ಉಪಕಾರಕ್ಕೆ ಬರುವ ಮಂಚಿಕೆಗ ಮತ್ತು ಮೇಜಿಯಾಕುವ ಬಗ್ಯೆ ಸಾಮಾನುಗಳು ಇವುಗಳಿಗೋಸ್ಕರ ಬೇಕಾದ ಮರಗಳು ಅಂದರೆ ವಿಂಗಡಿಸಲ್ಪ ರಖಮಿಗೆ ಸೇರದೇ ಯಿರತಕ್ಕಂಥಾ ಮರಗಳು ಮತ್ತು ಬೊಂಬೆಗಳು;

4ನೇದು.—ಗೊಬ್ಬರ ಮತ್ತು ಮಂಚಾಲಿಗೋಸ್ಕರ ಕಾಡುಜಾತಿ ಮರಗಳ ಕೊಂಬೆಗಳು; ಮತ್ತು

5ನೇದು.—ಮನೆ ಹೊದಿಸುವ ಬಗ್ಯೆ ಹುಲ್ಲು.

ಮೇಲ್ಕಂಡ ಸಾಮಾನುಗಳಲ್ಲದೆ, ರೈತರುಗಳು ಮನ್ನಾ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಿಂದ ಅಂಥಾ ಜಂಗಲಿಗಳು ಇರತಕ್ಕ ಡಿಪ್ಯೂಟಿ ಕಮ್ಮಿಷನರವ ಪಡೆದು ಹುಲ್ಲನ್ನು ಮುಫತ್ತಾಗಿ ಕ ಯಿದು ಸಾಗಿಸಬಹುದು.

6. 5ನೇ ರೂಲಿನ 1 ವ 3ನೇ ಕ್ಲಾಜ್‌ಗಳಲ್ಲಿ ವಿವರಿಸಲ್ಪಟ್ಟ ಕೆಲಸಗಳಿಗೋಸ್ಕರ ಮರವನ್ನು ಅಪೇಕ್ಷಿಸುವ ರೈತರು, ಅವರ ಗ್ರಾಮವಲ್ಲದ ಇತರ ಗ್ರಾಮದ ಸರಹದ್ದಿನಲ್ಲಾಗಲಿ ಅಥವಾ ಅವರಿಗೋಸ್ಕರ ಬಿಡಲ್ಪಟ್ಟ ಪ್ರದೇಶ ವಿನಾ ಅನ್ಯತ್ರವಾಗಲಿ ಮರವನ್ನು ಕತರಾಯಿಸಲು ಅಪೇಕ್ಷಿಸಿದರೆ, ಅವರು ಸದರೀ ಗ್ರಾಮದ ಪಟೇಲನ ಅಪ್ಪಣೆಯನ್ನು ಪಡಿಯಬೇಕು. ವ್ಯವಸಾಯ ಸಾಧನಗಳಿಗೋಸ್ಕರ ಕತರಾಯಿಸಲ್ಪಡುವ ಮರಗಳ ಪರಿಮಾಣವು, ಅಂಥಾ ಸಾಧನಗಳನ್ನು ತಯಾರ್ಮಾಡುವದಕ್ಕೆ ಅವಶ್ಯಕವಾಗಿ ಬೇಕಾದುದಕ್ಕಿಂತಲೂ ಭಾರಿಯಾಗಿರಕೂಡದು. 5ನೇ ರೂಲಿನ 3ನೇ ಕ್ಲಾಜ್ ಅನುಸರಿಸಿ ಮುಫತ್ತಾಗಿ ತೆಗದುಕೊಳ್ಳುವಂಥಾ ಮರವು, ಮಲ್ನಾಡಿನಲ್ಲಾಗಲಿ, ಮೈದಾನಿನಲ್ಲಾಗಲಿ, ಕಬ್ಬಿನ ಆಲೆಗಳು, ಭತ್ತ ಕುಟ್ಟುವ ಯಂತ್ರಗಳು ಮತ್ತು ಮಲ್ನಾಡಿನಲ್ಲಿನ ದನದ ತೊಟ್ಟಿಗಳು ಇವುಗಳಿಗೋಸ್ಕರ ವಲ್ಲದೆ ಅನ್ಯಥಾ ಸುತ್ತಳತೆಯಲ್ಲಿ ಯರಡು ಅಡಿಗೆ ಮಿಾರರಕೂಡದು.

6. (a) ಸಾಗರ ವ ನಗರ ತಾಲ್ಲೂಕುಗಳಲ್ಲಿನ ಬಾಜೂದಲ್ಲಿ ಕಂಡ ಮಾಗಣಿಗಳ ರೈತರುಗಳು ಸದ್ಯೇ ಕಾಡುಮರಗಳನ್ನು ಮು

ಸಾಗರದ ತಾಲ್ಲೂಕು.			ನಗರ ತಾಲ್ಲೂಕು.	ಫತ್ತಾಗಿ ಪ್ಯಾಸಿಲ್ಲದೆ ತೆಗದುಕೊಳ್ಳತಕ್ಕ
ಮರಬೂಡಿ.	ಸಾವಂತನಕಟ್ಟೆ.	ಬ್ರಹ್ಮನವಾಡ.	ಮೂಗನಾಡು.	ದ್ದು; ಪರಂತು ಅವರು ತಮ್ಮಿಂದ ತೆಗದು
ಡಿಟೋ	ಸಾರಲಹೊಳೆ.	ನಾಡವಾಡ.	ಕಬ್ಬನಾಡು.	ಕೊಳ್ಳಲ್ಪಟ್ಟ ತೇದಾದನ್ನು ಸದರೀ ಗ್ರಾ
ಕಾರೂರು.	ಮಳಲಿ.	ಬ್ರಹ್ಮನವಾಡ.		ಮದ ಪಟೇಲನಿಗೆ ರಿಪೋರ್ಟು ಮಾಡಬೇ
ಡಿಟೋ	ಯಿಡವನಿ.	ನಾಡವಾಡ.		ಕು. ಆತನು ಆ ಸಂಗತಿಯನ್ನು ತಾಲ್ಲೂ
ಸಾಲನಾಡು.	ಆವಿನಹಳ್ಳಿ.			ಕುಅಮಲ್ದಾರರಿಗೆ ಜಾಹಿರ್ಮಾಡತಕ್ಕದ್ದು.

7. ಮಲ್ನಾಡಿನಲ್ಲಿ ರೈತರು ಪ್ಯಾಸಿಲ್ಲದೆ ಮುಫತ್ತಾಗಿ ಬೇಲಿಗಳಿಗೋಸ್ಕರ ಬೊಂಬಿನ ಕಂಪೆಗಳನ್ನು ಪಡೆಯತಕ್ಕದ್ದು, ಮತ್ತು ಕಬ್ಬಿನ ಬೇಲಿ ವ ನೀರಿನ ವಡ್ಡಿಗೋಸ್ಕರ ಜೀಕಾದ ವಣಗಿದ ಈಚಲು ಅಥವಾ ಬಗನಿ ಮರಗಳನ್ನು ವ್ಯವಸಾಯ ಕೆಲಸಗಳಿಗೋಸ್ಕರ ಪತ್ತಗಳನ್ನು ಸುದಾ ಬದನ್ನೂರು ಪಡೆಯುತಕ್ಕದ್ದು.

8. ಮಲ್ನಾಡು ವ ಮೈದಾ ಪ್ರಾಂತ್ಯಗಳ ರೈತರುಗಳು ಕಟ್ಟಣ ಮತ್ತು ವ್ಯವಸಾಯ ಕೆಲಸಗಳಿಗೋಸ್ಕರ ಜೀಕಾದ ಮರ ವ ಬೊಂಬುಗಳನ್ನು 1ನೇ ರೂಲಿನಲ್ಲಿ ನಮೂದ್ ಮಾಡಲ್ಪಟ್ಟಂಥಾ ಗ್ರಾಮವು ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಇದರಡಿ ನಮೂದ್ ಮಾಡಲ್ಪಟ್ಟ ಸುಲಭ ತೀರ್ವೇ ಪಾವತಿ ಮಾಡಿ ತೆಗದುಕೊಳ್ಳಬಹುದು. ಪರಂತು, ಹಾಂಗೆ ಪಡೆಯೋಣಾದ ಮರ ವ ಬೊಂಬುಗಳು, ಸದರೀ ಫಾರೆಸ್ಟು ಕೀರಿಸಲ್ಪಟ್ಟಿರತಕ್ಕಂಥಾ ಅಥವಾ ಗೊತ್ತು ಮಾಡಲ್ಪಟ್ಟಿರತಕ್ಕಂಥಾ ಗ್ರಾಮದಲ್ಲಿ ಇರತಕ್ಕ ಅವರ ವ್ಯವಸಾಯದ ಮನೆಗಳನ್ನು ಮತ್ತು ವಾಸಮಾಡುವ ಮನೆಗಳನ್ನು ಕಟ್ಟುವ ಬಗ್ಯೂ ರಿಪೇರಿ ಮಾಡುವ ಬಗ್ಯೂ ಉಪಯೋಗಿಸಲ್ಪಡತಕ್ಕದ್ದು.

		ರೂ.	ಆ.	ಪೈ.
ಮಲ್ನಾಡಿನಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಖವಾಯಿ) ಭಂಡಿ ಬೋಜಾ 1ಕ್ಕೆ	3	0	0
	ಹೊನ್ನೇಮರ, ಭಂಡಿ ಬೋಜಾ 1ಕ್ಕೆ	5	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ, ಭಂಡಿ ಬೋಜಾ 1ಕ್ಕೆ	1	0	0
	ಕಾಡುಜಾತಿ ಮರಗಳು, ಭಂಡಿ ಬೋಜಾ 1ಕ್ಕೆ ಮತ್ತು ಕಿರಿಬಿದರು ದರ 100ಕ್ಕೆ. ..	0	8	0
	ಕಾಡುಮರದ ಕೂಚಗಳು ದರ ಭಂಡಿ ಬೋಜಾ 1ಕ್ಕೆ.	0	8	0
	ಗರಟೆಯಾನೆ ಚಿಕ್ಕ ಗಟ್ಟಿ ಬೊಂಬುಗಳು ದರ 100ಕ್ಕೆ.	0	4	0
	ಹೆಬ್ಬಿದರು, ದರ 100ಕ್ಕೆ.	0	0	0
ಮೈದಾನಿನಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಖವಾಯಿ) ಭಂಡಿ ಬೋಜಾ 1ಕ್ಕೆ	5	0	0
	ಹೊನ್ನೇಮರ, ಭಂಡಿ ಬೋಜಾ 1ಕ್ಕೆ.	7	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ ಭಂಡಿ ಬೋಜಾ 1ಕ್ಕೆ ..	2	0	0
	ಕಾಡುಜಾತಿ ಮರ, ಭಂಡಿ ಬೋಜಾ 1ಕ್ಕೆ ಕಿರಿಬಿದರು ದರ 100ಕ್ಕೆ. ..	1	8	0
	ಹೆಬ್ಬಿದರು ದರ 100ಕ್ಕೆ.	3	8	0

ಸೊರಬ ವ ಷಿಕಾರಿಪುರ ತಾಲ್ಲೂಕಿನ ಅರ್ಧ ಮಲ್ನಾಡ್ ಮಾಗಣಿಗಳಲ್ಲೂ, ಕುಮಸಿ ಸಬ್ ತಾಲ್ಲೂಕಿನಲ್ಲೂ ಮತ್ತು ಡೆಪ್ಯೂಟಿ ಕಮ್ಮಿಷನರವರು ಮೈಸೂರು ಗೆಜೆಟ್ಟಿನಲ್ಲಿ ಡಿಸ್ಟ್ರಿಕ್ಟು ಆರ್ಡರ್ಸನ್ನು ಪ್ರಕಟ ಪಡಿಸುವದರ ಮೂಲಕ ಈ ರೂಲಿನ ರಿಯಾಯತಿಗಳನ್ನು ವಿಸ್ತರಿಸಬಹುದಾದಂಥಾ ಶಿವಮೊಗ್ಗಾ ತಾಲ್ಲೂಕಿನ ಯಾವದಾದರೂ ಮಾಗಣಿಗಳಲ್ಲೂ—

ಕಿರಿಬಿದರು ದರ 100ಕ್ಕೆ .. .. .. 1 ರೂಪಾಯಿ.

9. ಯಾವದಾದರೊಂದು ಪಟ್ಟದಹಳ್ಳದ ಯಾ ಆದಕ್ಕೆ ಬಂದು ಕೀರುವ ಕಾಲವೆಗಳ ಥಡಗಳಿಂದ 50 ಗಜದ ವಳಗಿನ ಫಾಸಲೆಯಲ್ಲಾಗಲಿ, ಅಥವಾ ಯಾವದಾದರೂ ಜಲಾಧಾರದ ಮೂಲದಿಂದ 50 ಗಜಗಳ ಕಮ್ಮಿ ಫಾಸಲೆಯಲ್ಲಾಗಲಿ ಅಥವಾ ಯಾವದಾದರೂ ರಸ್ತೆಯಿಂದ 50 ಗಜಗಳ ಫಾಸಲೆ ವಳಗಾಗಲಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಿನೊಳಗಾದರೂ ಮರ, ಸೊಪ್ಪು, ಬೊಂಬುಗಳು ಅಥವಾ ಜಂಗಲ್ ಕತರಾಯಿಸಲ್ಪಡಕೂಡದು, ಮತ್ತು ಅಲ್ಲಿ ಯಾವ ಮರ ಅಥವಾ ಹುಲ್ಲಾಗಲಿ ಸುಡಲ್ಪಡಕೂಡದು.

10. 8ನೇ ರೂಲ್ ಅನುಸರಿಸಿ ಸುಲಭ ತೀರ್ವೇ ಮೇಲೆ ಕೊಡಲ್ಪಡುವ ಮರಗಳು ವಬ್ಬಿ ರೈತನಿಗೆ ಮೈದಾನಿನಲ್ಲಿ ವಂದು ದಸ್ವಾಲಿನಲ್ಲಿಯೂ, ಮಲ್ನಾಡಿನಲ್ಲಿ ವಂದು ಪಂಚಸಾಲಿನಲ್ಲಿಯೂ 50 ಭಂಡಿ ಬೋಜಾಗಳಿಗೆ ಜಾಸ್ತಿ ಯಾಗಕೂಡದು. ಪ್ರತಿ ಸಂಗತಿಯಲ್ಲಿಯೂ 50 ಭಂಡಿ ಬೋಜಾ ಮರಗಳು ಅವಶ್ಯವಾಗಿ ಕೊಡಬೇಕೆಂದು ಅರ್ಥಮಾಡಲ್ಪಡಕೂಡದು. ಇದು ಕೊಡಬಹುದಾದ ಜಾಸ್ತೀ ತೇದಾದು ಆಗಿರುತ್ತೆ. ಪ್ರತಿ ಸಂಗತಿಯಲ್ಲಿಯೂ ಅಮಲ್ದಾರರು ರೈತನ ಆವಶ್ಯಕತೆಯನ್ನು ತಿಳಿದುಕೊಂಡು ವಾಸ್ತವ್ಯವಾಗಿ ಜೀಕಾಗುವ ತೇದಾದನ್ನು ಕೊಡತಕ್ಕದ್ದು. ಮತ್ತು ಈ ರಿಯಾಯತಿಯು ದುರುಪಯೋಗ ಪಡಿಸದಂತೆ ಅಮಲ್ದಾರರು ನಿಗಾ ಇಡಬೇಕಾಗಿರುತ್ತೆ. ಅಮಲ್ದಾರರು ಮರ ಅಥವಾ ಬೊಂಬುಗಳಿಗೋಸ್ಕರ ಬರುವ ದರಖಾಸ್ತುಗಳನ್ನು (ಅವು ಅದರಿಂದ ಫಾಯಿದೆ ಪಡೆಯುವ ಬಗ್ಯೆ ದರಖಾಸ್ತು ಮಾಡಲ್ಪಟ್ಟಿರುತ್ತೆಂದು ಕಂಡುಬಂದ ಸಂದರ್ಭದಲ್ಲಿ ಲೈಸೆನ್ಸು ಕೊಡದೆ ತಿರಸ್ಕರಿಸಬಹುದು.

11. ರೈತರುಗಳಿಗೆ 7, 8 ವ 10ನೇ ರೂಲ್‌ಗಳಿಂದ ಉಂಟುಮಾಡಲ್ಪಟ್ಟ ರಿಯಾಯತಿಗಳು ವಾಸ್ತವವಾಗಿ ಅವರ ಸ್ವಂತ ಉಪ ಯೋಗಕ್ಕೋಸ್ಕರ ಮಾತ್ರವೇ ಆಗಿರುತ್ತೆ. ಸದರೀ ಮೇಲ್ಕಂಡ ರೂಲ್ಸ್ ಅನುಸರಿಸಿ ಪಡೆಯೋಣಾದ ಯಾವ ಸಾಮಾನುಗಳಾಗಲಿ, ಇವರಿಂದ ವರ್ಗ, ಖರೀದಿ ಯಾ ವ್ಯಾಪಾರ ಉದ್ದಿಶ್ಯ ಅನ್ಯಾಕ್ರಾಂತ ಮಾಡಲ್ಪಡಕೂಡದು.

12. ರೂಲ್ 8ರ ಅನುಸಾರವಾಗಿ ಮರ ಯಾ ಬೊಂಬುಗಳನ್ನು ಪಡೆಯಲು ಅಪೇಕ್ಷಿಸುವಂಥಾ ಯಾವ ರೈತನಾದರೂ, ಸದರೀ ರೂಲ್ ಪ್ರಕಾರ ತಾನು ಕತರಾಯಿಸಲು ಹಕ್ಕುವುಳ್ಳ ಜಂಗಲಿಯು ಇರತಕ್ಕಂಥಾ ಸರಹದ್ದಿನ ತಾಲ್ಲೂಕು ಅಮಲ್ದಾರರಿಗೆ ದರಖಾಸ್ತು ಮಾಡತಕ್ಕದ್ದು.

13. 8ನೇ ರೂಲ್‌ನಲ್ಲಿ ವಿಧಿಸೋಣಾದ ಸೀನಿಯಾರೇಜ್ ಯಾನೆ ತೀರ್ವೆಯು ಪಾವತಿ ಮಾಡಲ್ಪಟ್ಟ ತರುವಾಯ ಅಮಲ್ದಾರರು ಫಾರ್ಮ್ ಡಿಕ್ಸ್ ಬಿ. ನಮೂನೆಯಲ್ಲಿ ಒಂದು ಲೈಸೆನ್ಸನ್ನು ಕೊಡತಕ್ಕದ್ದು. ಅಂಥಾ ಲೈಸೆನ್ಸು ವರ್ಗಮಾಡಲ್ಪಡತಕ್ಕದ್ದಲ್ಲ. ಸದರೀ ಲೈಸೆನ್ಸಿನ ಪರತ್ತುಗಳ ಪ್ರಕಾರ ನಡೆದುಕೊಳ್ಳುವದು ಲೈಸೆನ್ಸುದಾರನಿಗೆ ಕರ್ತವ್ಯವಾಗಿರುತ್ತೆ. ವಾಯಿದೆ ಮೀರಿದ ತಮಾಂ ಲೈಸೆನ್ಸುಗಳೂ ರದ್ದಾಗಿರತಕ್ಕವು. ಉಪಯೋಗಿಸಲ್ಪಡದ ಲೈಸೆನ್ಸುಗಳಿಗೋಸ್ಕರ ತೀರ್ವೆಯು ವಾಪಸು ಮಾಡಲ್ಪಡಕೂಡದು, ಅಥವಾ ಅವುಗಳಿಗೆ ಬದಲಾಗಿ ಹೊಸ ಲೈಸೆನ್ಸು ಕೊಡಲ್ಪಡತಕ್ಕದ್ದಲ್ಲವು.

14. ಲೈಸೆನ್ಸುದಾರನು, ಸದರೀ ಲೈಸೆನ್ಸಿನಲ್ಲಿ ಕಂಡ ಡಿಸ್ಟ್ರಿಕ್ಟು ಫಾರೆಸ್ಟ್ ಸರಹದ್ದುಗಳು ಕೇರಿ ಇರುವಂಥಾ ಗ್ರಾಮದ ಪಟೇಲನಿಗೆ ಸದರೀ ಲೈಸೆನ್ಸಿನ ಆಧಾರದ ಮೇಲೆ ತಾನು ಸಾಗಿಸತಕ್ಕಂಥಾ ಮರ ಯಾ ಬೊಂಬುಗಳು ಅಥವಾ ಇತರ ಸಾಮಾನುಗಳು ಇವುಗಳನ್ನು ತನಿಖೀ ಬ್ಯಾ ಹಾಜರ್ಮಾಡುವದಕ್ಕೆ ಮತ್ತು ಅದರಲ್ಲಿ ನಮೂದಾದ ತೇದಾದು ಕರಾರ್ವಾಕಾ ಇರುತ್ತೆಂದು ಪಟೇಲನಿಂದ ಇಂಡಾರ್ಸ್‌ಮೆಂಟಿಯಾನೆ ಷರಾ ಬರಿಸಿಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು. ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ತರುವಾಯ ಲೈಸೆನ್ಸ್ ಸಮೇತ ಸಾಗಿಸಲ್ಪಟ್ಟು ಸದರೀ ಲೈಸೆನ್ಸು ಅಂಥಾ ಮರ, ಬೊಂಬುಗಳು ಅಥವಾ ಇತರ ಪದಾರ್ಥಗಳು ಕೇರಿಸಲ್ಪಡುವಂಥಾ ಗ್ರಾಮದ ಪಟೇಲನಿಗೆ ಪಪ್ಪಿಸಲ್ಪಡತಕ್ಕದ್ದು, ಸದರೀ ಪಟೇಲನು ಲೈಸೆನ್ಸಿನೊಂದಿಗೆ ತೇದಾದನ್ನು ಮೊಕಾಬಿಲೆ ಮಾಡಿ ಸದರೀ ಲೈಸೆನ್ಸನ್ನು ತನ್ನ ಸರ್ಟಿಫಿಕೇಟ್ ಸಮೇತ ತಾಲ್ಲೂಕು ಅಮಲ್ದಾರ್ರಿಗೆ ಕಳುಹಿಸತಕ್ಕದ್ದು. ಅವರು ಲೈಸೆನ್ಸನ್ನು ಸಾದರ್ಮಾಡದವರಾಗಿದ್ದರೆ ಅದು ಸಾದರ್ಮಾಡಲ್ಪಟ್ಟಂಥಾ ಅಮಲ್ದಾರ್ರಿಗೆ ಕಳುಹಿಸತಕ್ಕದ್ದು. ಲೈಸೆನ್ಸಿನಲ್ಲಿ ಕೊಡೋಣಾದ ತೇದಾದು ಹುಟ್ಟುಬಹುದಾದಂಥಾ ಮರಗಳು ಮಾತ್ರವೇ ಕತರಾಯಿಸಲ್ಪಡತಕ್ಕದ್ದು. ಮನ್ನಾನೆ ಅಥವಾ ನಷ್ಟವಾಗುವಂತೆ ಕತರಾಯಿಸಿದರೆ ಈ ರಿಯಾಯತಿಯು ಅಂಥಾ ರೈತನಿಂದ ಪೂರ್ತಿಯಾಗಿಯಾದರೂ ಅಥವಾ ಕೆಲವು ಕಾಲದ ಮಟ್ಟಿಗಾದರೂ ವಾಪಸ್ ತೆಗದುಕೊಳ್ಳಲ್ಪಡುವದು.

15. ಮಲ್ನಾಡ್ ರೈತರಿಗೆ 5ನೇ ರೂಲಿನಲ್ಲಿ ಗೊತ್ತು ಮಾಡಲ್ಪಟ್ಟ ಮಾಫೀ ರಹದಾರಿಗಳು ಮತ್ತು 13ನೇ ರೂಲಿನಲ್ಲಿ ನಮೂನ್ಮಾಡಲ್ಪಟ್ಟ ತೀರ್ವೇ ಸಂದ ಲೈಸೆನ್ಸುಗಳು ಸುದಾ ಫಾರೆಸ್ಟ್, ರೆವಿನ್ಯೂ, ಪೊಲೀಸ್ ಆಫಿಸರ್‌ಗಳಿಂದ ತನಿಖೆ ನೋಡಲ್ಪಡುವ ಬ್ಯಾ ವಳಪ್ಪರತಕ್ಕದ್ದು, ಸದರೀ ಆಫಿಸರ್‌ಗಳು ಸದರೀ ಲೈಸೆನ್ಸಿನ ಷರತ್ತುಗಳು ಅತಿಕ್ರಮಿಸಲ್ಪಡಲಿಲ್ಲವೆಂದು ಅಥವಾ ಉಲ್ಲಂಘಿಸಲ್ಪಡಲಿಲ್ಲವೆಂದು ನೋಡುವ ಬ್ಯಾ ಬದ್ಧರಾಗಿರುತ್ತಾರೆ.

15 ಎ. ಯಾವ ಜಂಗಲಿಯಾಗಲಿ ಅಥವಾ ಅದರ ಭಾಗವಾಗಲಿ ವಿಶೇಷವಾಗಿ ಕತರಾಯಿಸಲ್ಪಟ್ಟಾಗ ಡಿಪ್ಯೂಟ್ಯ ಕಮ್ಮಿಷನರವರು ಅಂಥಾ ಜಂಗಲಿ ಯಾ ಬಂದು ಭಾಗವನ್ನು ಅವಶ್ಯಕವಾದ ವಾಯಿದೆ ಪರಿಯಂತ ಬಂದು ಮಾಡಿ ಆ ಸಂಗತಿಯನ್ನು ಗೆಜೆಟ್ಟಿನಲ್ಲಿ ಫಾಮಿಷ್ ಮಾಡಲು ಸ್ವತಂತ್ರರಿರುತ್ತಾರೆ.

16. ಮಲ್ನಾಡಿನ "ಕಾನುಗಳಲ್ಲಿ" ಅಥವಾ ಫಾರೆಸ್ಟ್ ಯಾ ರೆವಿನ್ಯೂ ಇಲಾಖೆಯವರು 4 ಅಥವಾ 15 ಎ. ಪ್ಯಾರಾ ಅನುಸರಿಸಿ ಬಂದ್ ಮಾಡಿರುವಂಥಾ ಯಾವದಾದರೂ ಗವರ್ಮೆಂಟ್ ಜಂಗಲಿಗಳಲ್ಲಿ ಮರಾ ಯಾ ಬೊಂಬುಗಳನ್ನು ಕತರಾಯಿಸುವ ಬ್ಯಾ ಯಾ ಲೈಸೆನ್ಸೂ ಕೊಡಲ್ಪಡಕೂಡದು. ಯಾವದಾದರೂ ಜಂಗಲಿಯು ಬ್ಲಂದ್ ಮಾಡಲ್ಪಟ್ಟ ಸಂಗತಿ ಕೂಡ್ಲೆ ಸದರೀ ತಾಲ್ಲೂಕು ಅಮಲ್ದಾರ್ರಿಗೆ ತಿಳಿಸಲ್ಪಡಬೇಕು.

17. 8ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತರಾಯಿಸಿ ಸಾಗಿಸುವಂಥಾ ಅಥವಾ ಅವಶ್ಯಕವಾದ ಲೈಸೆನ್ಸು ಪಡಿಯದೆ ಬಂದು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಸದರೀ ಲೈಸೆನ್ಸಿನಲ್ಲಿ ನಮೂದಾದ ತೇದಾದನ್ನು ಮೀರುವಂಥಾ ಯಾವ ರೈತನಾದರೂ ಗೊತ್ತಾದ ವಾಯಿದೆಯಲ್ಲಿ ಲೈಸೆನ್ಸನ್ನು ವಾಪಸ್ ಮಾಡುವದಕ್ಕೆ ತಪ್ಪಿದರೆ ಅಥವಾ ಸದರೀ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಈ ನಿಬಂಧನೆಗಳ ನಿಯಮಗಳನ್ನು ತಪ್ಪು ನಡೆದರೆ ಅವನು 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 40ನೇ ಸೆಕ್ಷನ್ ಅನುಸರಿಸಿ ದಂಡನೆಗೆ ಗುರಿಯಾಗಿರತಕ್ಕದ್ದು.

18. ಮೇಲೆ ಕೊಡೋಣಾದ ರಿಯಾಯತಿಗಳಿಗೋಸ್ಕರ, ಸ್ಟೇಟ್ ಫಾರೆಸ್ಟ್‌ಗಳು ವ ಪ್ಲಾಂಟೇಷನ್‌ಗಳ ನೆರೆಹೊರೆಯಲ್ಲಿ ವಾಸವಾಗಿರುವಂಥಾ ರೈತರುಗಳು ಸದರೀ ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ವುಂಟಾಗಬಹುದಾದ ಬೆಂಕಿಯನ್ನು ನಿರೋಧಪಡಿಸುವದಕ್ಕೆ, ಕಿಗ್ಗಿಸುವದಕ್ಕೆ ಅಥವಾ ಆರಿಸುವದಕ್ಕೆ ಫಾರೆಸ್ಟ್ ಇಲಾಖೆಯವರಿಗೆ ಕಾಮ್ಮಿಕ ಮಾಡಬೇಕಾಗಿ ಇರುತ್ತೆ. ಈ ವಿಷಯದಲ್ಲಿ ಅಕ್ರದ್ಧೆ ಯೇನಾದರೂ ತೋರಿಬಂದರೆ ರಿಯಾಯತಿಗಳು ಪೂರ್ತಿಯಾಗಾಗಲಿ ಕೆಲವು ಮಟ್ಟಿಗಾಗಲಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ರವರು ಗೊತ್ತು ಮಾಡುವಂಥಾ ಬಂದು ವಾಯಿದೆ ಪರಿಯಂತ ವಾಪಸ್ ತೆಗದುಕೊಳ್ಳಲ್ಪಡುವ ಬ್ಯಾ ಗುರಿಯಾಗಿರತಕ್ಕದ್ದು.

19. ರೈತರು ಬಂದು ಡಿಸ್ಟ್ರಿಕ್ಟು ಫಾರೆಸ್ಟಿನಲ್ಲಿ ಹುಲ್ಲು, ತರಗು, ಮುಳ್ಳು, ಅಥವಾ ಬಿದರು ಕಂಬೆಗಳಿಗೆ ಬೆಂಕಿ ಹಚ್ಚಿ ತದ್ವಾರಾ ಒಂದು ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನ್ನನ್ನು ಅಪಾಯ ಪಡಿಸದಂತೆ ಖಂಡಿತವಾಗಿ ನಿರೋಧಿಸಲ್ಪಟ್ಟಿರುತ್ತಾರೆ.

20. ಇದರಡಿಕಂಡ ಇಸ್ತಿಹಾರ್‌ನಾಮೆಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ:—

1873ನೇ ಇಸವಿ ಏಪ್ರಿಲ್ 23ನೇ ಮಾರ್ಕ್ಹಂ 5ನೇ ನಂಬರ್ ಇಸ್ತಿಹಾರ್‌ನಾಮೆ.
1874ನೇ ಇಸವಿ ಆಗಸ್ಟ್ 31ನೇ ಮಾರ್ಕ್ಹಂ 153ನೇ ನಂಬರ್ ಇಸ್ತಿಹಾರ್‌ನಾಮೆ ಮತ್ತು ಇದನ್ನು ರದ್ದುಮಾಡುವ 1887ನೇ ಇಸವಿ ಫಿಬ್ರವರಿ 11ನೇ ಮಾರ್ಕ್ಹಂ 244ನೇ ನಂಬರ್ ಇಸ್ತಿಹಾರ್‌ನಾಮೆ.
1873ನೇ ಇಸವಿ ಡಿಸೆಂಬರ್ 19ನೇ ಮಾರ್ಕ್ಹಂ 5323–83ನೇ ನಂಬರ್ ಪ್ರೊಸಿಡಿಂಗ್ಸ್.
1892ನೇ ಇಸವಿ ಡಿಸೆಂಬರ್ 9ನೇ ಮಾರ್ಕ್ಹಂ 9837—ಆರ್. ಎಫ್. 226—92ನೇ —ನಂಬರ್ ಪ್ರೊಸಿಡಿಂಗ್ಸ್.
1893ನೇ ಇಸವಿ ಸೆಪ್ಟಂಬರ್ 25ನೇ ಮಾರ್ಕ್ಹಂ 5822—ಆರ್. ಎಫ್. 226–92ನೇ ನಂಬರ್ ಪ್ರೊಸಿಡಿಂಗ್ಸ್.

} ಇವುಗಳು ಶಿವಮೊಗ್ಗಾ, ಕಡೂರು ಮತ್ತು ಹಾಸನ ಈ ಡಿಸ್ಟ್ರಿಕ್ಟುಗಳಿಗೆ ಲಗಾವಾಗುವ ಷ್ಟರ ಮಟ್ಟಿಗೆ.

8ನೇ ರೂಲಿನಲ್ಲಿ ನಮೂದಾದ "ಭಂಡಿಪೋಜಾ" ಅಂದರೆ ಯರಡು ಯತ್ತುಗಳಿಂದ ಯಳಿಯಲ್ಪಟ್ಟ ಕಂತ್ರಿ ಭಂಡಿಯಂದು ಅರ್ಥವಾಗತಕ್ಕದ್ದು. ನಾಲ್ಕು ಯತ್ತುಗಳಿಂದ ಯಳಿಯಲ್ಪಟ್ಟ ಭಂಡಿ ಪೋಜಾಕ್ಕೆ ದರವು ಯರಡು ಯತ್ತುಗಳಿಂದ ಯಳಿಯಲ್ಪಟ್ಟ ಭಂಡಿ ದರಕ್ಕೆ ದುಗಣಿಯಾಗಿ ಇರತಕ್ಕದ್ದು. ಮತ್ತು ಭಂಡಿ ಯಳಿಯುವ ಬಗ್ಗೆ ಜಾಸ್ತಿಯಾಗಿ ಕಟ್ಟಲ್ಪಡುವ ಪ್ರತಿ ಬಂದು ಜೋಡಿ ಯತ್ತಿಗೂ ಬದಸ್ತೂರ್ ಜಾಸ್ತೀ ಮಾಡಲ್ಪಡತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರವಿನ್ಯೂ ಸೆಕ್ರಟೆರಿ.

ಅರ್ಪೆಂಡಿಕ್ಸ್ A.

ಶಿವಮೊಗ್ಗಾ ಡಿಸ್ಟ್ರಿಕ್ಟು.—ತೀರ್ಥಹಳ್ಳಿ, ಸಾಗರ ವ ನಗರ ತಾಲ್ಲೂಕುಗಳು ಮತ್ತು ಸೊರಬ, ಕ್ಯಾಸನೂರು, ಚಂದ್ರಗುತ್ತಿ, ಚಿತ್ತೂರು, ಷಿಗ್ಗಾ ಮಾಗಣಿಗಳು ಮತ್ತು 1891ನೇ ಇಸವಿ ಅಕ್ಟೋಬರ್ 6ನೇ ಮಾರ್ಕ್ಹಂ 281ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕಂಥಾ ಅಂಡಿಗೆ, ತವನಂದಿ ಮತ್ತು ವುದ್ರಿ ಮಾಗಣಿಗಳ ಗ್ರಾಮಗಳು. ಸೊರಬ ತಾಲ್ಲೂಕಿನಲ್ಲಿ ಹೆಚ್ಚೆ ಮತ್ತು ಬಳಂದೂರು ವ ಬಾರೂರು ಮಾಗಣಿಗಳು, ಮತ್ತು ಷಿಕಾರಿಪುರ ತಾಲ್ಲೂಕು ದಾನಂದೂರು ಮಾಗಣಿ ದಾನಂದೂರು ಗ್ರಾಮ ಮತ್ತು 1891ನೇ ಇಸವಿ ಸೆಪ್ಟಂಬರ್ 30ನೇ ಮಾರ್ಕ್ಹಂ 280ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರುವ ದಾನಿವಾನ, ಕೋಣನಾಡ, ಗಾಜನೂರ, ಲಕ್ಕುವಳ್ಳಿ, ಕುಂಸಿ, ಜೋರಡಿ ವ ಆಯನೂರು ಈ ಮಾಗಣಿಗಳಲ್ಲಿನ ಗ್ರಾಮಗಳು.

ಹಾಸನ ಡಿಸ್ಟ್ರಿಕ್ಟು.—ಮಂಜೆರಾಬಾದ್ ತಾಲ್ಲೂಕಿನ ಬ್ಯಾಗಡಹಳ್ಳಿ, ಮಾರನಹಳ್ಳಿ ವ ಹಾನೆಬಾಳ್ ಹೋಬಳಿಗಳು.

ಕಡೂರು ಡಿಸ್ಟ್ರಿಕ್ಟು.—ಕೊಪ್ಪ ವ ಮೂಡಗೆರೆ ತಾಲ್ಲೂಕುಗಳು, ಕ್ಷಿತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ವ ಲಕ್ಕುವಳ್ಳಿ ಮಾಗಣಿಗಳು, ವಸ್ತಾರೆ, ಆಯನೂರು, ಕಡಗಲ್‌ನಾಡ್, ತಲದುರ್ನಾಡ್, ಅಲ್ದೂರ್, ಜಾಗರ, ಸಿರವಾಸಿ, ಮತ್ತು ಲಿಂಗೇನಹಳ್ಳಿ ಮಾಗಣಿಗಳು ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಮಾಗಣಿ ಹಿರೆಕೊಳಲೆ, ಚಿಕ್ಕೊಳಲೆ ಮತ್ತು ಅರಳಗುಪ್ಪೆ ಗ್ರಾಮಗಳು.

B. ನಮೂನೆ.

ರೈತರ ಹಕ್ಕುಗಳ ರೂಲ್ಸ್ ಅನುಸರಿಸಿ ಮರ, ಬೊಂಬುಗಳು ವ ಇತರ ಸಾಮಾನುಗಳನ್ನು ಕತರಾಯಿಸುವದಕ್ಕೆ, ಸಾಗಿಸುವದಕ್ಕೆ ಕೊಡಲ್ಪಟ್ಟ ಲೈಸೆನ್ಸು.

ಲೈಸೆನ್ಸು ಪಡದ ರೈತನ ಹೆಸರು ಮತ್ತು ನಾಮಸ್ಥಳ.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತ್ತರಾಯಿಸುವ ಬಗ್ಗೆ ಅಪ್ಪಣೆ ಕೊಡಲ್ಪಟ್ಟು ತೋರುವು.	ಕತರಾಯಿಸಲ್ಪಡಕ್ಕಾದ ಫಾರೆಸ್ಟ್ ನ ಗ್ರಾಮದ ಹೆಸರು.	ಮರ ನ ಬೊಂಬುಗಳು ಯಲ್ಲಿಗೆ ಮತ್ತು ಎಷ್ಟನ್ನು ಸಾಯಿಸಿದ ಪಳಿಗೆ ಸಾಗಿಸಲ್ಪಡತಕ್ಕದ್ದು.	ಸೀನಿಯಾರೇಜ್ ಯಾನೆ ತೀರ್ವೆ.		ಕತರಾಯಿಸಲ್ಪಡಕ್ಕಾದ ಮರಗಳ ವಿವರಣೆ.	ಇತರ ಸರಕ್ಕುಗಳು ಯೇನಾದರೂ ಇದ್ದರೆ.	ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ಕತರಾಯಿಸಲ್ಪಟ್ಟ ಸರಹದ್ದಿನ ಗ್ರಾಮದ ಪಟೇಲನಿಗೆ ತನ್ನಿಂದ ನಾಣ ಲ್ಯಡುವ ಬಗ್ಗೆ ಒಪ್ಪಿಡಿದ ತಾರೀಖು.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳು ಸಾಗಿಸಲ್ಪಟ್ಟು ಗ್ರಾಮದ ಪಟೇಲನಿಂದ ಚಿಲ್ಲರೆ ತನ್ನಿಂದ ಮಾಡ ಲ್ಪಡುವ ಬಗ್ಗೆ ಹಾಜರಾಡಿದ ತಾರೀಖು.	ತಾಲ್ಲೂಕಿನ ಅಮಲ್ದಾರರಿಗಾಗಲಿ ಅಥವಾ ಅದು ಸಾಧರ್ಮಾಡಿದ ಅಧಿಕಾರಿಗಾಗಲಿ ಲೈಸೆನ್ಸ ನಾಪಸ್ ಮಾಡಲ್ಪಡ್ಡ ಪ್ರಕಾರದ ಕಾಲ.	ಲೈಸೆನ್ಸು ನಾಪಸಾದ ಕಾಲ, ಮತ್ತು ಯಾರ ಬಗ್ಗೆ ನಾಪಸ್ ಮಾಡಲ್ಪಟ್ಟತೋ ಅಂಥಾ ಅಧಿಕಾರಿಯ ರಿಜಿ ಮತ್ತು ತಾರೀಖು.
				ಮೊಬಲಗು.	ನಾಣ್ಯ ತಾರೀಖು.						
1	2	3	4	5	6	7	8	9	10	11	12

ತಾರೀಖು 10ನೇ ಫಿಬ್ರವರಿ 1896.

ನಂ. 7158.—ರೆ. 2782.—ಇದರಡಿಕಂಡ ಅಮಲ್ದಾರರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಕೇಶವಯ್ಯಂಗಾರ್ರಿಗೆ ಶ್ರೀರಂಗಪಟ್ಣದಿಂದ ಚನ್ನರಾಯಪಟ್ಣಕ್ಕೆ—ಡೆಪ್ಯುಟಿ ಅಮಲ್ದಾರ್ರಿಗೆ ಚಾರ್ಜ್ ವಪ್ಪಿಸಿ ಕೂಡ್ಲೆ ಹೊರಟು ಹೋಗತಕ್ಕದ್ದು.

ವೆಂಕಟಾಚಲಯ್ಯನವರಿಗೆ ಯಡತೊರೆ ಯಿಂದ ಶ್ರೀರಂಗಪಟ್ಣಕ್ಕೆ—ತಾಲ್ಲೂಕು ಶಿರಸ್ತೇದಾರ್ರಿಗೆ ಚಾರ್ಜ್ ವಪ್ಪಿಸಿ ಕೆಲಸದವೇಲೆ ಕೂಡ್ಲೇ ಹೊರಟು ಹೋಗತಕ್ಕದ್ದು.

ಕೃಷ್ಣೇಅರಸಿನವರಿಗೆ ಚನ್ನರಾಯಪಟ್ಣದಿಂದ ಯಡತೊರೆಗೆ.

2. ಈ ಯೇರ್ಪಾಡಿನಿಂದ 1896ನೇ ಇಸವಿ ಜನವರಿ 30ನೇ ಮಕ್ಕಂ 6805.—2647ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಮಾಡೋಣಾದ ನೇಮಣೂಕಿಗಳು ರದ್ದು ಮಾಡಲ್ಪಟ್ಟಿರುತವೆ.

ನಂ. 7163.—ರೆ. 2787.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್/ಪಿ. ವೆಂಕಟರಾಯರಿಗೆ, 1896ನೇ ಇಸವಿ ಫಿಬ್ರವರಿ 17ನೇ ಮಕ್ಕಂ ಲಾಗಾಯತು ಯಾ ಅವರದನ್ನ ಉಪಯೋಗಿಸಿಕೊಂಡ ತಾರೀಖು ವೊದಲು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7190.—ರೆ. 2800.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ, ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫಿಸರ್ ಮೆಸ್ಸರ್ ಬಿ. ಜಿ. ಕೃಷ್ಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7193.—ರೆ. 2803.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ, ಹೊಸಕೋಟೇ ತಾಲ್ಲೂಕು ಅಮಲ್ದಾರ್ ಬಾವಾರಾವ್ ಬಿ. ಎ. ಯವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ವೊದಲು 3 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು ಚಾಲತಿ ರವಿನ್ಯೂ ಕೆಲಸಗಳ ಚಾರ್ಜ್ ವಹಿಸಿರತಕ್ಕದ್ದು.

ನಂ. 7204.—ರೆ. 2814.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ, ಶ್ರೀನಿವಾಸಪುರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಶಿರಾವೊಹದೀನಲ್ಲಿಯವರಿಗೆ ಅವರುಪಯೋಗಿಸಿಕೊಂಡ ತಾರೀಖು ಲಾಗಾಯತು 7 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಶಿರಾವೊಹದೀನಲ್ಲಿಯವರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಂತಾಮಣಿ ತಾಲ್ಲೂಕು ಅಮಲ್ದಾರ್ರು, ಅವರ ಕೆಲಸಗಳೊಂದಿಗೆ ಸದರೀ ಸಬ್ ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 12ನೇ ಫಿಬ್ರವರಿ 1896.

ನಂ. 7187.—ರೆ. 2797.—ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಪಿ. ಶ್ರೀನಿವಾಸರಾಯರ ನವುಕರಿಯು ಹಂಗಾಮಿತರೇಕ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ತಾಬೆಗೆ ಕೊಟ್ಟಿರುವದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಕೆಲಸನೋಡುತ್ತಿರುವ ಅಮಲ್ದಾರ್ ಎ. ಗೋಪಾಲಯ್ಯಂಗಾರ್ರಿಗೆ, ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತೆ.

ನಂ. 7196.—ರೆ. 2806.—ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ, ಕೋಲಾರ ತಾಲ್ಲೂಕು ಅಮಲ್ದಾರ್ ಸಿ. ಕೇಷಾದ್ರಿ ಅಯ್ಯಂಗಾರ್ರಿಗೆ, 1896ನೇ ಇಸವಿ ಜನವರಿ 31ನೇ ಮಕ್ಕಂ ಲಾಗಾಯತು ಅಥವಾ ಅವರುಪಯೋಗಿಸಿಕೊಂಡ ತಾರೀಖು ವೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು, ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಟೋ ತಾಲ್ಲೂಕಿನ ಜಾಲತೀ ಕೆಲಸಗಳ ಚಾರ್ಜನ್ನ ವಹಿಸಿರತಕ್ಕದ್ದು.

ನಂ. 7200.—ರೆ. 2810.—ಇದರಡಿ ಕಂಡ ಡೆಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ತಿರುನಾರಣಯ್ಯಂಗಾರ್ರಿಗೆ, ಹುಳಿಯಾರದಿಂದ ಕೊಳ್ಳೇಪೇಟೆಗೆ (ಕಾಣಿಗಲ್ ತಾಲ್ಲೂಕಿನ ಚಾರ್ಜ್ ವಪ್ಪಿಸಿದನಂತರ ಹೋಗಿ ಕೇರತಕ್ಕದ್ದು.)

ಬಿ. ವಾಸುದೇವರಾಯರಿಗೆ, ಕೊಳ್ಳೇಪೇಟೆಯಿಂದ ಕೊರಟಗೆರೆಗೆ (ತಿರುನಾರಣಯ್ಯಂಗಾರ್ರಿಗೆ ಚಾರ್ಜ್ ಕೊಟ್ಟ ತರುವಾಯ ಹೊಗಿ ಕೇರತಕ್ಕದ್ದು.)

ಬಿ. ಕೇಶವಯ್ಯನವರಿಗೆ ಕೊರಟಗೆರೆಯಿಂದ ಹುಳಿಯಾರಿಗೆ. (ಬಿ. ವಾಸುದೇವರಾಯರಿಗೆ ಚಾರ್ಜ್ ವಪ್ಪಿಸಿದನಂತರ ಹೋಗಿ ಕೇರತಕ್ಕದ್ದು.)

ತಾರೀಖು 13ನೇ ಫಿಬ್ರವರಿ 1896.

ನಂ. 7263.—ರೆ. 2836.—ಚಿತ್ರದುರ್ಗದ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಮೆಸ್ಸರ್ ಎಂ. ಎಸ್. ನಾರಾಯಣರಾಯರಿಗೆ, 1896ನೇ ಇಸವಿ ಜನವರಿ 1ನೇ ಮಕ್ಕಂ ಕ್ಯಾಂ. 12ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 5 ದಿವಸಗಳ ಕ್ಯಾಜುಯಲ್ ರಜಾ ಅವರ ಖಾಯಿಷ್ ಮೇರೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 14ನೇ ಫಿಬ್ರವರಿ 1896.

ನಂ. 7339 —ರೆ. 2866.—ಮೈಸೂರ ಸರ್ವಿಸ್ ರೆಗ್ಯುಲೇಷ್ನಗಳ 172ನೇ ಆರ್ಟಿಕಲ್ ಅನುಸರಿಸಿ, ದೇವನಹಳ್ಳಿ ತಾಲ್ಲೂಕ ಅಮಲ್ದಾರ ಟಿ. ಚಿಕ್ಕಣ್ಣ ಬಿ. ಎ. ಯವರಿಗೆ, 1896ನೇ ಇಸವಿ ಫಿಬ್ರವರಿ 6ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟಿ. ಚಿಕ್ಕಣ್ಣನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕು ಶಿರಸ್ತೇದಾರು ತಾಲ್ಲೂಕು ಚಾಲತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 15ನೇ ಫಿಬ್ರವರಿ 1896.

ನಂ. 7395.—ರೆ. 2880.—ಚಿತ್ರದುರ್ಗ ಡಿಪ್ಯುಟೈಜರಿ ಅಸಿಸ್ಟೆಂಟ್ ಕಮಿಷನರ ಮೆಸ್ಸರ್ ಸಿ. ಕೃಷ್ಣರಾಯರು ಅವರಿಗೆ, 1896ನೇ ಇಸವಿ ಜನವರಿ 22ನೇ ಮುಕ್ತಂ, 6601. ರ. 2545.ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಮೂಲಕ ಕೊಡಲ್ಪಟ್ಟ ಕ್ಯಾಜುಯಲ್ ರಜಾವನ್ನು ಮಾಹೆ ಗುಜಸ್ತಾ 27ನೇ ಮುಕ್ತಂ ಮಧ್ಯಾನ್ಹಾತ್ಪರ ಉಪಯೋಗಿಸಿಕೊಂಡು ಮಾಹೆ ಮಜಕೂರ 5ನೇ ಮುಕ್ತಂ ಅಪರಾನ್ಹದಲ್ಲಿ ಕೆಲಸದ ಮೇಲೆ ವಾಪಸ್ ಬಂದಿರುತ್ತಾರಾಗಿ ರಜಾದ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವೆ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ರೆ ಬಿ ಲ್ವೆ.

ಇಸ್ತಿಹಾರ್‌ನಾಮೆ.

ಮೈಸೂರು ಗವರ್ನಮೆಂಟಿನವರಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಜರ್ಮ್ಯಾಗಳು ಸರಕಾರದ ಕೆಲಸೆಕ್ಕೋಸ್ಕರ ಅರಸೀಕೆರೆ ಯಿಂದ ಮಂಗಳೂರಿಗೆ ಅಂತರೆ ಹಾಬನಳಟ್ಟ, ಅಡಿಹಳ್ಳಿ, ಬಾಗಡದೇವುದ್ದ, ಹಾಸನ, ಆಲೂರು, ಬೆಳಗೋಡು, ಸಕಲೇಶಪುರ, ಹೆಬ್ಬನಾಲ, ಯಟಿಯಾನಹಳ್ಳಿ ಹಳ್ಳಿ, ಕೆಂಪಕಲ ಮತ್ತು ಮರಳೀಬೀಡ ಮಾರ್ಗವಾಗಿ ರಯಿಲ್ ರಸ್ತೆಯನ್ನು ಹಾಕುವ ಬಗ್ಗೆ ಬಹುಶಃ ಬೇಕಾಗಬಹುದೆಂದು ಕಾಣಬರುವದರಿಂದ ಇದಕ್ಕೆ ಸಂಬಂಧಪಟ್ಟ ತಮಾಂ ಜನಗಳಿಗೂ ಇದರಿಂದ ತಿಳಿಸುವದೇನಂದರೆ,—1894ನೇ ಇಸವಿ VIIನೇ ನಂಬರ ಮೈಸೂರು ಲ್ಯಾಂಡ್ ಅಕ್ವಿಜಿಷ್ನ ರೆಗ್ಯುಲೇಷನಿನ 4 ವ 5ನೇ ಸೆಕ್ಷನ್‌ಗಳಿಂದ ವುಂಟುಮಾಡಲ್ಪಟ್ಟ ಅಧಿಕಾರಗಳನ್ನ ಚಲಾಯಿಸುವದರಲ್ಲಿ ಮೈಸೂರು ಗವರ್ನಮೆಂಟಿನವರು, ಸದರೀ ಗವರ್ನಮೆಂಟಿನ ರೈಲ್ವೇ ಇಲಾಖೆ ಸೆಕ್ರೆಟರಿಯವರನ್ನೂ ಅವರ ತಾಬೇದಾರರನ್ನೂ ಮತ್ತು ಅವರ ನವುಕರರುಗಳನ್ನೂ ಸುದಾ ಈ ಆಕ್ಟಿನ ಕೆಲಸಗಳಿಗೋಸ್ಕರ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜಿಬ್,
ಸಿ. ಬರ್ಡ ಕರ್ನಲ್,
ರೆಯಿಲ್ವೇ ಸೆಕ್ರೆಟರಿ.